ಸೃಜನಿ

**SRUJANI: Indian Journal of Innovative Research and Development (SIJIRD)**
Volume-4 Issue 4, September-October 2025, Pp. 98-101
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬ್ರಹ್ಮಶ್ರೀ ನಾರಾಯಣ ಗುರುಗಳ ಸಾಮಾಜಿಕ ಚಲನೆಯ ದೂರದೃಷ್ಟಿ ಕುರಿತ ಒಂದು ಸಮಾಜಶಾಸ್ತ್ರೀಯ ಅವಲೋಕನ

**ಡಾ. ನಿಂಗಪ್ಪ[1] ಮತ್ತು ಡಾ. ಸಂಗನಗೌಡ ಶಿವನಗೌಡ[2]**
[1]ಅತಿಥಿ ಉಪನ್ಯಾಸಕರು, ಸರ್ಕಾರಿ ಪದವಿ ಮಹಾವಿದ್ಯಾಲಯ, ಸಿಂಧನೂರು
[2]ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಲಿಂಗಸುಗೂರು

**Abstract:**
*ಬ್ರಹ್ಮಶ್ರೀ ಅವರು ಇಂದಿಗೂ ಜೀವಂತ ಕಾರಣ ಸಮಾನತೆ ಏಕತೆ ಬ್ರಾತೃತ್ವ ಕುರಿತಂತೆ ಅನುಸರಿಸಿದ ಮಾರ್ಗ ಜನರನ್ನು ಅಜ್ಞಾನದಿಂದ ಕತ್ತಲೆಯಿಂದ ಮೌಢ್ಯದಿಂದ ಶೋಷಣೆಯಿಂದ ಹೊರತರಲು ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟರು. ಪ್ರತಿಯೊಂದು ಜೀವಿಯಲ್ಲಿಯೂ ಪರಮಾತ್ಮನ ಅಸ್ತಿತ್ವವಿದೆ ಎಂದು ಸಾರಿದರು. ಮುಕ್ತಿ ದೊರೆಯಬೇಕಾದರೆ ಜ್ಞಾನ ಮತ್ತು ಸಹಾನುಭೂತಿಗಳಿಂದ ಮಾತ್ರ ಸಾಧ್ಯ ವಿನಃ, ಅಂದಶ್ರದ್ಧೆಗಳಿಂದಲ್ಲ ಎಂದು ಬೋಧಿಸಿದರು. ಮಾನವೀಯತೆಗೆ ಎದುರಾಗುವ ಸಂಘರ್ಷಗಳೆಲ್ಲ ಬ್ರಹ್ಮಶ್ರೀ ಅವರ ಸಮಾನತೆ, ಏಕತೆ ಹಾಗೂ ಪರಸ್ಪರ ಗೌರವ ಸಿದ್ಧಾಂತಗಳೆ ಪರಿಹಾರ ಅವುಗಳನ್ನು ಅಳವಡಿಸಿಕೊಂಡು ಸಾಗುವುದು ಅತ್ಯವಶ್ಯಕವಾಗಿದೆ.*

**Keywords:** *ಬ್ರಹ್ಮಶ್ರೀ ನಾರಾಯಣ ಗುರು, ಏಕತೆ, ಸಮಾನತೆ, ಸಾಮಾಜಿಕ ಚಳವಳಿ*

## ಪೀಠಿಕೆ

ಅಲೆಕ್ಸ್ ಇಂಕಲ್ಸ್ "ಯಾವುದೇ ಕ್ಷೇತ್ರದಲ್ಲಿ ಬೌದ್ಧಿಕ ಕ್ರಿಯಾಶೀಲ ಪ್ರಯತ್ನಕ್ಕೆ ಮಿತಿಗಳನ್ನು ಏರುವುದು ಸಹಜವಾಗಿ ವಿಫಲವಾಗುತ್ತದೆ ಎನ್ನುವ ಅನುಭವವಾಣಿಯಂತೆ ಸಾಮಾಜಿಕ ಚಳುವಳಿಗಳಿಂದ ಬದಲಾವಣೆ ಚಲನೆ ಆಗಬೇಕಾದರೆ ವೃತ್ತಿಗಳ ಮೇಲೆ ಹೇರಿರುವ ನಿಬರ್ಂಧ ಮತ್ತು ಜಾತಿ ವ್ಯವಸ್ಥೆಯಲ್ಲಿನ ಅಂಧ ಶ್ರದ್ಧೆ, ದೇವರು ಧರ್ಮದ ಆರಾಧನೆ ವಿಧಾನದಿಂದ ಮಡಿ ಮೈಲಿಗೆ ನಂಬಿಕೆಯಿಂದ ಶೂದ್ರ ಮತ್ತು ಚಂಡಾಲ ವರ್ಗಗಳು ಅಂಚಿಕೃತಗೊಂಡವು ಕಾಲ ನಂತರದಲ್ಲಿ ಸುಧಾರಣಾ ಚಳುವಳಿಗಳ ಅವಧೂತರು ಅವತರಿಸಿದರು ಸಹ ಬದಲಾವಣೆ ಆಗದೆ ಜನರು ಸಾಮಾಜಿಕ ಸ್ತರವ್ಯವಸ್ಥೆಯನ್ನು ಅವಲಂಬಿಸಿದರು. ಹಾಗೂ ಆರ್ಥಿಕವಾಗಿ ಸದೃಢವಾಗದೆ ಸಾಮಾಜಿಕವಾಗಿ ಸ್ವಾವಲಂಬನೆಯಾಗದೆ ಶೈಕ್ಷಣಿಕವಾಗಿ ಸ್ವತಂತ್ರರಾಗದೆ ರಾಜಕೀಯವಾಗಿ ಜಾಗೃತರಾಗದೆಯಿದ್ದರೆ ಸಾಮಾಜಿಕ ಚಲನೆ ನಗಣ್ಯವಾಗುತ್ತದೆ.

ಭಾರತವು ಅತ್ಯಂತ ಸಾಮಾಜಿಕ ಅಸಮಾನತೆ ಮತ್ತು ಧಾರ್ಮಿಕ ಬೇಧ ಭಾವ ಅವಕಾಶಗಳಿಂದ ವಂಚಿತರಾದ ಅಂಚಿಕೃತ ಸಮುದಾಯಗಳ ಶೈಕ್ಷಣಿಕ ಆರ್ಥಿಕ ಮತ್ತು ರಾಜಕೀಯ ಸಮಾನತೆ ಮತ್ತು ಏಳಿಗೆಗಾಗಿ ಹಲವಾರು ದಾರ್ಶನಿಕರು ರಾಜ

**Please cite this article as:** ನಿಂಗಪ್ಪ ಮತ್ತು ಸಂಗನಗೌಡ ಶಿವನಗೌಡ. (2025). ಬ್ರಹ್ಮಶ್ರೀ ನಾರಾಯಣ ಗುರುಗಳ ಸಾಮಾಜಿಕ ಚಲನೆಯ ದೂರದೃಷ್ಟಿ ಕುರಿತ ಒಂದು ಸಮಾಜಶಾಸ್ತ್ರೀಯ ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 4(4), 98–101

ಮಹಾರಾಜರು ಸಾಮಾಜಿಕ ಚಳವಳಿಯ ನೇತಾರರು ಈ ವ್ಯವಸ್ಥೆಯಲ್ಲಿನ ಜ್ವಲಂತ ಸಮಸ್ಯೆಗಳ ನಿರ್ಮೂಲನೆಗಾಗಿ ಶ್ರಮಿಸಿದ್ದಾರೆ. ಇವರಲ್ಲಿ ಪ್ರಮುಖರಾದವರು ಶೋಷಿತರ ಮತ್ತು ಅಲಕ್ಷಿತರ ಆಶಾಕಿರಣ ಬ್ರಹ್ಮಶ್ರೀ ನಾರಾಯಣ ಗುರುಗಳು.

**ಬ್ರಹ್ಮಶ್ರೀ ನಾರಾಯಣ ಗುರುಗಳು (1854–1928)**

ಕೇರಳದ ಚಂಪಜಂತಿಯ ಮದ್ನಹಾಸನ್ ಮತ್ತು ಕುಟ್ಟಿ ಅಮ್ಮಳ್ ದಂಪತಿಗಳ ಸುಪುತ್ರರಾಗಿ ಇಳವ ಸಮುದಾಯದಲ್ಲಿ ಜನಿಸಿದರು. ಕೇರಳದಲ್ಲಿ ಇರುವ ತಮಿಳು ಬ್ರಾಹ್ಮಣರು ಮಲೆಯಾಳಿ ಬ್ರಾಹ್ಮಣರಿಗಿಂತ ಹೆಚ್ಚು ಸೌಲಭ್ಯ ಪಡೆದು ಆಡಳಿತ ಶಿಕ್ಷಣ ಮತ್ತು ಸಾರ್ವಜನಿಕ ಸೇವೆಯಲ್ಲಿ ಉನ್ನತ ಅಂತಸ್ತು ಗಳಿಸಿದ್ದರು. ನಾಯರ್ ಜಾತಿಯ ಬ್ರಾಹ್ಮಣರು ತಮಿಳು ಬ್ರಾಹ್ಮಣರ ವಿರುದ್ಧ ಮಲಯಾಳಂ ಸಭಾ ಸಂಘಟನೆಯ ಮೂಲಕ ಮಹಾರಾಜರಿಗೆ ಮನವಿ ಮಾಡಿ ಸ್ಥಳೀಯರಿಗೆ ಅವಕಾಶ ಪಡೆಯುವಲ್ಲಿ ಯಶಸ್ವಿಯಾದರು, ಆದರೆ ಈ ಚಳುವಳಿಯಿಂದ ಕ್ರೈಸ್ತರು, ಮುಸಲ್ಮಾನರು ಮತ್ತು ಇಳವ, ಬಿಲ್ಲವ ಸಮುದಾಯಗಳು ಬಲಿ ಪಶುವಾಗುವುದನ್ನು ತಪ್ಪಿಸಿ ಈ ಸಾಮಾಜಿಕ ಸ್ತರ ವ್ಯವಸ್ಥೆಯಲ್ಲಿ ಜನರು ಹೊರಗೂಳಿಯಲ್ಪಟ್ಟರು, ಇಂಥ ಸಂದರ್ಭದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳು 1903 ರಲ್ಲಿ ಧರ್ಮ ಪರಿಪಾಲನ ಯೋಗಂ ಸಂಘಟನೆಯ ಮೂಲಕ ಜಾತಿ ರಹಿತ ಸಮಾಜ ನಿರ್ಮಾಣ ಉದ್ದೇಶದಿಂದ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು, ಆದರೆ ಇವರು ಬ್ರಾಹ್ಮಣರ ವಿರೋಧಿಗಳಾಗಿರಲಿಲ್ಲ.

ಕೇರಳದ ಟ್ರವಾಂಕೂರ್ ಮತ್ತು ಮಲಬಾರ್ ಪ್ರದೇಶಗಳಲ್ಲಿ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆಯೊಂದಿಗೆ ಅಲಕ್ಷಿತ ಜಾತಿಯಾದ ಇಳವರನ್ನು ಹಾಗೂ ಸಾಮಾಜಿಕವಾಗಿ ಹಿಂದುಳಿದ ವರ್ಗಗಳನ್ನು ಸಂಘಟನಾತ್ಮಕವಾಗಿ ಹಾಗೂ ಶೈಕ್ಷಣಿಕವಾಗಿ ಸಶಕ್ತಗೊಳಿಸುವುದಾಗಿತ್ತು. ಬ್ರಹ್ಮಶ್ರೀ ನಾರಾಯಣ ಗುರುಗಳ ಧ್ಯೇಯ– ಹಿಂದುಳಿದ ಮತ್ತು ಶೋಷಿತ ಸಮುದಾಯಗಳ ಸಬಲೀಕರಣ ಮತ್ತು ಧ್ಯೇಯ ವಾಕ್ಯ – ಜಾತಿ ಮತಗಳು ಅದೆಷ್ಟೇ ದ್ವೇಷದ ಗೋಡೆಗಳನ್ನು ಎಬ್ಬಿಸಿದರೂ ನಾವೆಲ್ಲರೂ ಸಹೋದರ ಸಮಾನರು ಎಂಬುದೇ ಆತ್ಯಂತಿಕ ಸತ್ಯ ಎಂದು ಸಾರಿದರು. ಬ್ರಹ್ಮಶ್ರೀ ನಾರಾಯಣ ಗುರುಗಳ ಚಿಂತನೆಯು ತಮ್ಮ ಅನುಯಾಯಿಗಳೊಂದಿಗೆ ಐದು ಹಂತಗಳಲ್ಲಿ ಮುನ್ನಡೆದಿರುವುದು ಗಮನಾರ್ಹ

- ನಾರಾಯಣ ಗುರುಗಳು– ಧಾರ್ಮಿಕ ಜಾಗೃತಿ
- ಡಾ. ಪದ್ಮನಾಭ ಪಲ್ಪು– ಸಾಮಾಜಿಕ ಜಾಗೃತಿ
- ಕುಮಾರ ಆಶಂ – ಶೈಕ್ಷಣಿಕ ಜಾಗೃತಿ
- ಟಿ ಕೆ ಮಾಧವನ್ನ್ – ದೇವಸ್ಥಾನ ಪ್ರವೇಶಕ್ಕಾಗಿ ಚಳುವಳಿ
- ಸಿ. ಕೇಶವನ್ – ರಾಜಕೀಯ ಪ್ರಾತಿನಿಧ್ಯಕ್ಕಾಗಿ ಚಳುವಳಿ

**ನಾರಾಯಣ ಗುರುಗಳು**

ಶಿವನ ದೇವಾಲಯಕ್ಕೆ ಶೂದ್ರರು ಮತ್ತು ಅಲಕ್ಷಿತರು ಇಳವ ಮತ್ತು ಬಿಲ್ಲವ ಸಮುದಾಯದವರು ಪ್ರವೇಶಿಸುವುದರಿಂದ ಅಪವಿತ್ರವಾಗುತ್ತದೆ ಎನ್ನುವ ಅಂಧಶ್ರದ್ಧೆಗೆ ಬ್ರಹ್ಮಶ್ರೀ ಅವರು 1888 ರಲ್ಲಿ ಕೇರಳದ ಅರವಿಪುರಂ ಎಂಬ ಸ್ಥಳದಲ್ಲಿ ಶಿವಲಿಂಗ ಸ್ಥಾಪಿಸುವ ಮೂಲಕ ಮೊದಲ ದೇವಾಲಯವನ್ನು ನಿರ್ಮಿಸಿದರು ಈ ಶಿವ ಇಳವ ಶಿವ ಈ ಶಿವ ಶೂದ್ರನ ಶಿವ ಈ ಶಿವಾಲಯಕ್ಕೆ ಯಾರು ಬೇಕಾದರೂ ಬರಬಹುದು ಇಲ್ಲಿಗೆ ಬಂದವರೆಲ್ಲ ಪವಿತ್ರರಾಗುತ್ತಾರೆ ಎನ್ನುವ ಸತ್ಯವನ್ನು ಸಾರಿ ಮೊದಲ ಶಿವ ದೇವಾಲಯವನ್ನು ನಿರ್ಮಿಸಿದರು. ಇದರಿಂದ ಕೇರಳದಾದ್ಯಂತ ಸಾಮಾಜಿಕ ಧಾರ್ಮಿಕ ಆರ್ಥಿಕ ರಾಜಕೀಯ ವಲಯಗಳಲ್ಲಿ ತೀವ್ರವಾದ ಪಲ್ಲಟಗಳು ಬೆಳಕಿಗೆ ಬಂದವು ಮತ್ತು ಪೂಜೆ ಪುನಸ್ಕಾರ ವೈವಾಹಿಕ ಆಚರಣೆಗಳನ್ನು ತುಂಬಾ ಸರಳಗೊಳಿಸಿದರು. 1924ರಲ್ಲಿ ವೈಕಂ ಸತ್ಯಂ ಎಂಬಲ್ಲಿ ಶಿವ ದೇವಾಲಯ ಪ್ರವೇಶಿಸಿದರು ಈ ಚಳುವಳಿಯಲ್ಲಿ ಮಹಾತ್ಮ ಗಾಂಧೀಜಿ ಮತ್ತು ಪೆರಿಯಾರ್ ಅವರು

ಭಾಗವಹಿಸಿರುವುದು ಮತ್ತೊಂದು ಮೈಲುಗಲ್ಲಾಯಿತು. 1903 ರಲ್ಲಿ ಧರ್ಮ ಪರಿಪಾಲನ ಯೋಗಂ ಸಂಘಟನೆಯ ಮುಖಾಂತರ ಜನ ಸಮುದಾಯವು ಜಾತ್ಯತೀತರಾಗುವುದು ಮತ್ತು ಆಧ್ಯಾತ್ಮಿಕ ಶಕ್ತಿ ಬೆಳಸುವ ಉದ್ದೇಶವಿತ್ತು ಮತ್ತು ಜನರಲ್ಲಿ ಆತ್ಮವಿಶ್ವಾಸ ಸಾಮಾಜಿಕ ಜಾಗೃತಿ ಹಾಗೂ ಸ್ವಚ್ಛತೆಯ ಶುದ್ಧ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದು ಆಹಾರ ಅಭ್ಯಾಸದ ಮೂಲಕ ಸುಧಾರಣೆ ಮತ್ತು ಪರಿಶುದ್ಧರಾಗಬಹುದೆಂದು ಬೋಧಿಸಿದರು. ಬ್ರಹ್ಮಶ್ರೀ ಅವರು ಸಾಮಾಜಿಕ ಕ್ರಾಂತಿ ಎಂದರೆ ಒಂದು ಜಾತಿ ಒಂದು ಧರ್ಮ ಒಬ್ಬ ದೇವರು ಅಂದರೆ ಮನುಷ್ಯ ಜಾತಿ ಮನುಷ್ಯತ್ವದ ಧರ್ಮ ಸೃಷ್ಟಿಕರ್ತ ಒಬ್ಬನೇ ದೇವರು ಎಂಬ ಧ್ಯೇಯ ವಾಕ್ಯದೊಂದಿಗೆ ಜಾತಿ ರಹಿತ ಸಮಾಜ ನಿರ್ಮಿಸಲು ಕೇರಳದಲ್ಲಿ ಸಾಮಾಜಿಕ ಕ್ರಾಂತಿಯನ್ನು ಕೈಗೊಂಡರು. ಇಂದು ನಾರಾಯಣ ಗುರುಗಳ ವಿಗ್ರಹವನ್ನು ಮಾಡಿ ದೇವಸ್ಥಾನದಲ್ಲಿ ಪ್ರತಿಷ್ಠಾಪನೆ ಮಾಡಿ ಪೂಜಿಸುತ್ತಿರುವುದನ್ನು ಕಾಣಬಹುದು. ವಿಪರ್ಯಾಸ ಎಂದರೆ ಹಿಂದೂ ಸಮಾಜದಲ್ಲಿ ಮನುಷ್ಯ ಮನುಷ್ಯನನ್ನಾಗಿ ನೋಡುವುದು, ಮತ್ತು ಸಮಾಜ–ವಿಜ್ಞಾನದ ದೃಷ್ಟಿಯಿಂದ ನೋಡದೇ ಇರುವುದು ಈ ವ್ಯವಸ್ಥೆಯ ಒಂದು ದುರಂತವಾಗಿದೆ.

ಡಾ. ಪದ್ಮನಾಥ್ ಪಲ್ಪುರವರು ಗುರುಗಳ ಅನುಯಾಯಿಗಳಾಗಿದ್ದು ಮೂಲತಃ ವೈದ್ಯರಾಗಿದ್ದು ಸಾಮಾಜಿಕ ಚಳುವಳಿಗಳಲ್ಲಿ ಮುಂಚೂಣಿ ನಾಯಕರಾಗಿದ್ದರು. ಪ್ರಬಲರ ಮತ್ತು ವೈದಿಕ ಸಮುದಾಯಗಳ ವಿರುದ್ಧ ಹೋರಾಟ ಪ್ರಾರಂಭಿಸಿದರು. ಹಿಂದುಳಿದ ಮತ್ತು ಅಲಕ್ಷಿತ ಸಮುದಾಯಗಳ ಸಾಮಾಜಿಕ ಮತ್ತು ಧಾರ್ಮಿಕವಾಗಿ ಜಾಗೃತನ್ನಾಗಿಸಲು ತಮ್ಮನ್ನು ಅರ್ಪಣೆ ಮಾಡಿಕೊಂಡರು.

1884ರಲ್ಲಿ ಟ್ರಾವಾಂಕೂರ್ ರಾಜ್ಯ ಸರ್ಕಾರದ ವೈದ್ಯ ಶಿಕ್ಷಣದ ಸಿಇಟಿ ಪರೀಕ್ಷೆಯಲ್ಲಿ ನಾಲ್ಕನೇ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದರು ಸಹ ವೈದ್ಯಕೀಯ ಶಿಕ್ಷಣ ವ್ಯಾಸಂಗಕ್ಕೆ ಪ್ರವೇಶ ನಿರಾಕರಿಸಲಾಯಿತು. ಕಾರಣ ಕೆಳಜಾತಿ ಎನ್ನುವುದಾಗಿತ್ತು. ಇಂತಹ ಪರಿಸ್ಥಿತಿ ಕೇರಳ ರಾಜ್ಯದಲ್ಲಿ ಸಾಮಾನ್ಯವಾಗಿತ್ತು ನಂತರ ಮದ್ರಾಸ್ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆದು ವ್ಯಾಸಂಗ ಮುಗಿಸಿಕೊಂಡು ಟ್ರಾವಾಂಕೂರ್‌ಗೆ ಬಂದರು. ಆದರೂ ಸಹ ಅವರು ತಳಸಮುದಾಯಕ್ಕೆ ಸೇರಿದ್ದರಿಂದ ವೈದ್ಯ ವೃತ್ತಿ ಕೈಗೊಳ್ಳದಂತೆ ನಿರ್ಬಂಧ ಹೇರಲಾಗಿತ್ತು.

1903ರಲ್ಲಿ ಶ್ರೀ ನಾರಾಯಣ ಧರ್ಮ ಪರಿಪಾಲನ ಯೋಗಂ (ಎಸ್‌ಎನ್‌ಡಿಪಿ) ಸ್ಥಾಪಿಸಿ ಇದರ ಮುಖಾಂತರ ಕೇರಳದಲ್ಲಿ ಹಲವಾರು ಸಾಮಾಜಿಕ ಚಳುವಳಿ ಮಾಡಿದರು ಹಾಗೂ ಮಲಬಾರ್ ಆರ್ಥಿಕ ಯೂನಿಯನ್ ಮತ್ತು ಇಳವ ಮಹಾಸಭಾ (ಇಳವರ ಸಂಘ)ಗಳ ಮುಖಾಂತರ 10,000 ಇಳವ ಸಮುದಾಯದ ಜನರ ಸಹಿಯೊಂದಿಗೆ ಉನ್ನತ ಜಾತಿಯ ಸಮುದಾಯದವರ ಮಾಡುವ ಶೋಷಣೆ ಮತ್ತು ತಾರತಮ್ಯದ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದರು ಮತ್ತು ಟ್ರಾವಾಂಕೂರ್ ಸರ್ಕಾರ ಶೋಷಿತರಿಗೆ ಅನ್ಯಾಯ ಮಾಡುತ್ತದೆ ಎಂದು ಬ್ರಿಟಿಷ್ ಸಂಸತ್ತಿನಲ್ಲಿ ಎಲ್ಲರ ಗಮನ ಸೆಳೆದರು. ಸಾಮಾಜಿಕ ಜಾಗೃತಿಯನ್ನು ಪ್ರಾರಂಭಿಸಿದರು ಅಂದರೆ ಅಲಕ್ಷಿತ ಶೋಷಿತ ಹಿಂದುಳಿದ ಜನ ಸಮುದಾಯದಲ್ಲಿ ಮೇಲು ಕೀಳು ಎನ್ನುವ ಭಾವನೆಯನ್ನು ಹೋಗಲಾಡಿಸುವುದು ಸಂಘಟನಾತ್ಮಕ ಮನೋಭಾವನೆಯನ್ನು ಜನರಲ್ಲಿ ಮೂಡಿಸುವುದಾಗಿತ್ತು.

ಕುಮಾರ ಆಶಂರವರು ಶೈಕ್ಷಣಿಕ ಚಟುವಟಿಕೆಯಿಂದ ಯಾರು ವಂಚಿತರಾಗಬಾರದು ಶಿಕ್ಷಣ ಉಳ್ಳವರ ಮತ್ತು ಮೇಲ್ವರ್ಗದವರ ಸ್ವತ್ತಲ್ಲ ಎನ್ನುವ ಧ್ಯೇಯದೊಂದಿಗೆ ಬ್ರಹ್ಮಶ್ರೀ ಅವರ ನೇತೃತ್ವದಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿದರು ಇಂದು ಕೇರಳ ಸಾಕ್ಷರತೆಯ ನಾಡಾಗಿರುವುದು ಇವರ ಪರಿಶ್ರಮ ಕಾರಣ.

ಟಿ.ಕೆ. ಮಾಧವನ್ ರವರು ದೇವಸ್ಥಾನ ಪ್ರವೇಶಕ್ಕಾಗಿ ಚಳುವಳಿಯನ್ನು ಪ್ರಾರಂಭಿಸಿದರು ಕಾರಣ ಶೇಕಡ 26 ರಷ್ಟು ಇಳವ ಮತ್ತು ಬಿಲ್ಲವ ಜನಸಮುದಾಯವಿದ್ದು ಇವರಿಗೆ ದೇವಸ್ಥಾನಕ್ಕೆ ಪ್ರವೇಶ ಇರಲಿಲ್ಲ ರಸ್ತೆಯ ಮೇಲೆ ಚಪ್ಪಲಿ ಹಾಕಿಕೊಂಡು ನಡೆದಾಡುವ ಹಾಗೆ ಇರಲಿಲ್ಲ ಇಂಥ ಕಟ್ಟುಪಾಡಿನಲ್ಲಿ ಅಲಕ್ಷಿತರ ಜೀವನವನ್ನು ಕಂಡ ಇವರು ಬ್ರಹ್ಮಶ್ರೀ ಅವರ ಸಹಯೋಗದೊಂದಿಗೆ ಶಿವ ದೇವಸ್ಥಾನಗಳನ್ನು ಜನರ ಬಳಿಗೆ ತಂದರು ಮತ್ತು ಕ್ರೈಸ್ತ ಮಿಷನರಿಗಳು ಕ್ರೈಸ್ತ ಧರ್ಮದ ಬಗ್ಗೆ ಸದ್ದಿಲ್ಲದೆ ಪ್ರಚಾರ ಮತ್ತು ಮತಾಂತರದ ಕಾರ್ಯಗಳು ಸಾಗುತ್ತಿದ್ದಾಗ ಈ ಅಲಕ್ಷಿತ ಇಳವ, ಬಿಲ್ಲವ ಸಮಾಜಗಳಲ್ಲಿ ಜಾಗೃತಿ ಮೂಡಿಸಲು ಶ್ರಮಿಸಿದ್ದಾರೆ.

ಕೇಶವನ್ ಪಿ ರವರ ಮುಂದಾಳತ್ವದಲ್ಲಿ ರಾಜಕೀಯ ಪ್ರಾತಿನಿಧ್ಯಕ್ಕೆ ಕರೆ ನೀಡಿದರು ಈ ಪ್ರದೇಶದಲ್ಲಿ ಮಹಿಳೆಯರ ಮೊಲೆಯಾಧಾರಿತ ತೆರಿಗೆ ಪದ್ಧತಿಗೆ ಬಲಿಪಶುವಾಗುವ ಅನಿಷ್ಟ ಪದ್ಧತಿಯನ್ನು ನಿರ್ಮೂಲನೆ ಮಾಡಲು ಪ್ರಯತ್ನ ಇಳುವ ಮತ್ತು ಶೋಷಿತ ಸಮುದಾಯಗಳಲ್ಲಿ ರಾಜಕೀಯ ಮತ್ತು ಪ್ರಜಾಪ್ರಭುತ್ವದ ಅಂಶಗಳನ್ನು ಪರಿಪಾಲಿಸುವಂತೆ ಜಾಗೃತಿ ಕಾರ್ಯ ಕೈಗೊಂಡರು. ಇಳವರು ಎಂದರೆ ಈಟಿಯನ್ನು ಬಳಸುವವರು ಮತ್ತು ಬಿಲ್ಲವರು ಎಂದರೆ ಬಿಲ್ಲನ್ನು ಬಳಸುವವರು ಅರ್ಥಾತ್ ಈ ಸಮುದಾಯಗಳು ಕ್ಷತ್ರಿಯ ಜನಾಂಗದ ಒಳ ಪಂಗಡವಾಗಿದ್ದವು ಎಂಬ ಮಾಹಿತಿಗಳನ್ನು ಪ್ರಚಾರ ಮಾಡಿದರು.

ಸ್ವಾಮಿ ವಿವೇಕಾನಂದರ ಪ್ರೋತ್ಸಾಹದೊಂದಿಗೆ ಮತ್ತು ಆತ್ಮೀಯ ಶಿಷ್ಯರೊಂದಿಗೆ ಬ್ರಹ್ಮಶ್ರೀ ಅವರು ಕೇರಳದಲ್ಲಿ ಅಲಕ್ಷಿತ ಮತ್ತು ಶೋಷಿತರನ್ನು ಇಳವ ಬಿಲ್ಲವ ಸಮುದಾಯಗಳು ಬಲಿ ಪಶುವಾಗುವುದನ್ನು ತಪ್ಪಿಸಿ ಈ ಸಾಮಾಜಿಕ ಸ್ತರ ವ್ಯವಸ್ಥೆಯಲ್ಲಿ ಆರ್ಥಿಕವಾಗಿ ಸದೃಢರನ್ನಾಗಿ ಸಾಮಾಜಿಕವಾಗಿ ಸಬಲರನ್ನಾಗಿ ಶೈಕ್ಷಣಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಕ್ರಾಂತಿಕಾರಕ ಮತ್ತು ಸಾಮಾಜಿಕ ಅಸ್ತಿತ್ವಕ್ಕಾಗಿ ದೃಢ ಹೆಜ್ಜೆಯನಿಟ್ಟರು.

**ಸಮಾರೋಪ**

ಅಖಂಡ ಭರತ ಖಂಡದಲ್ಲಿ ಸಾಮಾಜಿಕ ಸುಸ್ಥಿರತೆಯಾಗಬೇಕಾದರೆ ಗೌತಮ ಬುದ್ಧನ 'ತನು' ಬಸವಣ್ಣನವರ 'ಮನಸ್ಸು' ಬ್ರಹ್ಮಶ್ರೀ ರವರ 'ಆತ್ಮ'ದೊಂದಿಗೆ ಈ ವ್ಯವಸ್ಥೆಯನ್ನು ಕಟ್ಟಬೇಕಾಗಿದೆ.

**ಪರಾಮರ್ಶನ ಗ್ರಂಥಗಳು**


- ಭಾಸ್ಕರನ್, ಟಿ. (2019). ಬ್ರಹ್ಮಶ್ರೀ ನಾರಾಯಣಗುರು. ಸಾಹಿತ್ಯ ಅಕಾಡೆಮಿ.
- ಇಂದಿರಾ, ಆರ್. (1971). *ಭಾರತೀಯ ಸಮಾಜ*. ಕನ್ನಡ ಪುಸ್ತಕ ಪ್ರಾಧಿಕಾರ.
- ಗುರುಲಿಂಗಯ್ಯ, ಎಂ. (2006). *ಅಲಕ್ಷಿತರ ಸಮಾಜಶಾಸ್ತ್ರ*. ದೂರ ಶಿಕ್ಷಣ ನಿರ್ದೇಶನಾಲಯ, ಕನ್ನಡ ವಿಶ್ವವಿದ್ಯಾಲಯ.
- ಮಾಯಪ್ಪ, ಕೆ. (2019). *ಭಾರತೀಯ ಸಮಾಜದ ಸಮಾಜಶಾಸ್ತ್ರ*. ವಿನಾಯಕ ಪ್ರಿಂಟರ್ಸ್.
- ಮೀನಾಕ್ಷಿ ರಾಮಚಂದ್ರ. (2017). ಶ್ರೀ ನಾರಾಯಣ ಗುರು ಆಧ್ಯಾತ್ಮ ಪಂಥ ಕೈಗಂಬ. ಅಯೋಧ್ಯ ಪ್ರಕಾಶನ.
- ಪರಮೇಶ್ವರ, ಪಿ. (2016). ಶ್ರೀ ನಾರಾಯಣ ಗುರು (ಅನುವಾದ). ರಾಷ್ಟ್ರೋತ್ಥಾನ ಸಾಹಿತ್ಯ.